# ಸಂಬಂಧ ಪಟ್ಟ ಎಲ್ಲರ ಮಾಹಿತಿಗಾಗಿ

ಯಶಸ್ವಿನಿ ಯೋಜನೆಗೆ ಸದಸ್ಯತ್ವ ನೋಂದಣಿ ಭರದಿಂದ ಸಾಗುತ್ತಿರುವುದು ಸಂತೋಷದ ಸಂಗತಿ. ಇದಕ್ಕಾಗಿ ಎಲ್ಲಾ ಇಲಾಖಾಧಿಕಾರಿಗಳಿಗೆ ಸಹಕಾರ ಸಂಘಗಳ ಮುಖ್ಯಕಾರ್ಯನಿರ್ವಾಹಣಾಧಿಕಾರಿಗಳಿಗೆ ಧನ್ಯವಾದಗಳು ಮತ್ತು ಆತ್ಮೀಯ ಅಭಿನಂದನೆಗಳು. ಸದಸ್ಯತ್ವ ನೋಂದಣಿ ನಮೂನೆ ಭರ್ತಿಮಾಡಲು ವಿಸ್ತೃತ ಮಾರ್ಗ ಸೂಚಿಗಳನ್ನು ಸರ್ಕಾರದಿಂದ/ನಿಬಂಧಕರಿಂದ ಈಗಾಗಲೇ ನೀಡಲಾಗಿದೆ. ಅದಾಗ್ಯೂ ಸದಸ್ಯತ್ವ ನೋಂದಣಿ ಬಗ್ಗೆ ಸ್ಪಷ್ಟೀಕರಣಗಳನ್ನು ನಿರಂತರವಾಗಿ ಕೇಳುತ್ತಿರುತ್ತಾರೆ. ಅದರಂತೆ ಈ ಕೆಳಕಂಡ ಸ್ಪಷ್ಟೀಕರಣ ನೀಡಲಾಗಿದೆ.

## Frequently Asked Questions

1. PACS (P.K.P.S) ನಗರ ಪ್ರದೇಶ ವ್ಯಾಪ್ತಿಯಲ್ಲಿ ಇದ್ದಲ್ಲಿ ಅಂತಹ ಸಂಘದ ಸದಸ್ಯರನ್ನು ನಗರ ಸದಸ್ಯರೆಂದು ಪರಿಗಣಿಸಬೇಕೆ? ಅಥವಾ ಗ್ರಾಮೀಣ ಎಂದು ಪರಿಗಣಿಸಬೇಕೆ?

   PACS ಮತ್ತು MPCS ಗಳು ನಗರ ಪ್ರದೇಶಕ್ಕೆ ವಿಸ್ತರಿಸಿದ್ದರೂ ಸಹ ಯಶಸ್ವಿನಿ ಯೋಜನೆ ಉದ್ದೇಶಕ್ಕಾಗಿ ಗ್ರಾಮಾಂತರ ಸದಸ್ಯರೆಂದು ಪರಿಗಣಿಸತಕ್ಕದ್ದು.

   ಅದೇ ರೀತಿ ಸ್ವ-ಸಹಾಯ ಗುಂಪುಗಳು (ಸಹಕಾರ ಇಲಾಖೆಯಲ್ಲಿ ಸಹಕಾರ ಸಂಘಗಳು ರಚಿಸಿರುವ SHGಗಳು) ನಗರ ಪ್ರದೇಶದಲ್ಲಿದ್ದರೂ ಅದರ ಸದಸ್ಯರನ್ನು ಗ್ರಾಮಾಂತರ ಸದಸ್ಯರೆಂದು ಪರಿಗಣಿಸತಕ್ಕದ್ದು.

2. TAPCMS ಮತ್ತು PLD ಬ್ಯಾಂಕಿನ ಸದಸ್ಯರನ್ನು ಗ್ರಾಮಾಂತರ ಸದಸ್ಯರೆಂದು ಪರಿಗಣಿಸಬೇಕೆ? ಅಥವಾ ನಗರ ಪ್ರದೇಶವೆಂದು ಪರಿಗಣಿಸಬೇಕೆ?

   TAPCMS ಮತ್ತು PLD ಬ್ಯಾಂಕ್‌ಗಳ ಅರ್ಹ ಬಿಡಿ ಸದಸ್ಯರು ರೈತ ಸದಸ್ಯರಾಗಿರುವುದರಿಂದ ಇವರನ್ನು ಗ್ರಾಮಾಂತರ ಸದಸ್ಯರೆಂದು ಪರಿಗಣಿಸತಕ್ಕದ್ದು.

3. ಕೆಲವು ಸದಸ್ಯರ ರೇಷನ್ ಕಾರ್ಡ್ ವಿವರಗಳು ಲಭ್ಯವಾಗುತ್ತಿಲ್ಲ, ಅಂತಹ ಅರ್ಹ ಸದಸ್ಯರನ್ನು ಯಾವ ರೀತಿ ಪರಿಗಣಿಸಬೇಕು.

   ರೇಷನ್ ಕಾರ್ಡ್ ಲಭ್ಯವಿಲ್ಲದಿದ್ದಲ್ಲಿ ಆ ಸ್ಥಳವನ್ನು ಖಾಲಿ ಬಿಡಿ. ಅಂತಹ ಕುಟುಂಬವನ್ನು ಎ.ಪಿ.ಎಲ್ ಕುಟುಂಬ ಎಂದು ಪರಿಗಣಿಸಲಾಗುವುದು. ಯಶಸ್ವಿನಿ ಸದಸ್ಯತ್ವ ನೋಂದಣಿಗೆ ರೇಷನ್ ಕಾರ್ಡ್ ಕಡ್ಡಾಯವಿರುವುದಿಲ್ಲ. ರೇಷನ್ ಕಾರ್ಡ್ ಲಭ್ಯವಿಲ್ಲವೆಂಬ ಕಾರಣಕ್ಕೆ ಸದಸ್ಯತ್ವ ನಿರಾಕರಿಸತಕ್ಕದ್ದಲ್ಲ. ಆದರೆ ಅರ್ಹ ಸದಸ್ಯರನ್ನು ದೃಢಪಡಿಸಿಕೊಳ್ಳಲು ಅವರ ಸರಿಯಾದ ಆಧಾರ ಸಂಖ್ಯೆ ನೀಡುವುದು ಕಡ್ಡಾಯವಿರುತ್ತದೆ.

4. ಪರಿಶಿಷ್ಠ ಜಾತಿ/ಪರಿಶಿಷ್ಠ ಪಂಗಡ ಸದಸ್ಯರ ಜಾತಿ ಪ್ರಮಾಣ ಪತ್ರ ಅಥವಾ ದೃಢಿಕರಣ ಪತ್ರ ಪಡೆಯಬೇಕೆ?

   ಪರಿಶಿಷ್ಠ ಜಾತಿ/ಪರಿಶಿಷ್ಠ ಪಂಗಂಡ ಸದಸ್ಯರ ಶುಲ್ಕವನ್ನು ಸರ್ಕಾರವು ಎಸ್‌ಸಿಪಿ/ಟಿಎಸ್‌ಪಿ ಅನುದಾನದಿಂದ ಭರಿಸುತ್ತಿರುವುದರಿಂದ ಫಲಾನುಭವಿಗಳ ವಿವರಗಳನ್ನು ಕೆಡಿಪಿ ಸಭೆಗೆ ಒದಗಿಸಬೇಕಾಗಿದ್ದು, ಪರಿಶಿಷ್ಠ ಜಾತಿ/ಪರಿಶಿಷ್ಠ ಪಂಗಂಡ ಸದಸ್ಯರ ಕುಟುಂಬದ ಪ್ರತಿಯೊಬ್ಬರ RD ನಂಬರ್ ಇರುವ ಜಾತಿ ಪ್ರಮಾಣ ಪತ್ರದ ಪ್ರತಿಯನ್ನು ಸಲ್ಲಿಸಬೇಕು.

5. ಪರಿಶಿಷ್ಠ ಜಾತಿ/ಪರಿಶಿಷ್ಠ ಪಂಗಂಡ ಸದಸ್ಯರಿಂದ ಸದಸ್ಯತ್ವ ಶುಲ್ಕ ಸರ್ಕಾರದಿಂದಲೇ ಭರಿಸುತ್ತಿರುವುದರಿಂದ ಸದಸ್ಯರಿಂದ ಯಾವುದೇ ವಂತಿಗೆ ಸಂಗ್ರಹಿಸುವಂತಿಲ್ಲ. ಇದನ್ನು ಸಂಘದ ಲೆಕ್ಕಪುಸ್ತಕಗಳಲ್ಲಿ ಯಾವ ರೀತಿ ಪರಿಗಣಿಸಬೇಕು?

ಈ ಪ್ರಕರಣದಲ್ಲಿ ಸಾಮಾನ್ಯ ಸದಸ್ಯರ ರೀತಿಯಲ್ಲೇ ಸಂಘದ ರಶೀದಿ ಪಾಸು ಮಾಡಿ ಸಂಘದ ಲೆಕ್ಕ ಪುಸ್ತಕದಲ್ಲಿ ನಮೂದಿಸಿ, ಷರಾದಲ್ಲಿ ಸರ್ಕಾರದಿಂದ ಬರತಕ್ಕ ಮೊತ್ತವೆಂದು ನಮೂದಿಸುವುದು. ಈ ಮೊತ್ತವನ್ನು ಸರ್ಕಾರದಿಂದ ಕ್ಲೈಂ ಮಾಡಿದ ನಂತರ ಹೊಂದಾಣಿಕೆ ಮಾಡಿಕೊಳ್ಳತಕ್ಕದ್ದು.

6. ಪರಿಶಿಷ್ಠ ಜಾತಿ/ಪರಿಶಿಷ್ಠ ಪಂಗಂಡ ಸದಸ್ಯರ ಕುಟುಂಬದ ಕಾರ್ಡಿಗೆ ರೂ.10/- ಗಳ ಪ್ರೋತ್ಸಾಹ ಧನವನ್ನು ಸಂಗ್ರಹಿಸಬೇಕೆ? ಮತ್ತು ಸಂಗ್ರಹಿಸಬೇಕಾದಲ್ಲಿ ಯಾವ ರೀತಿ ಸಂಗ್ರಹಿಸಬೇಕು.

ಸರ್ಕಾರದಿಂದ ಈ ಸಮುದಾಯದ ಸದಸ್ಯ ಶುಲ್ಕವನ್ನು ಕ್ಲೈಂ ಮಾಡಿ ಈ ಪೈಕಿ ರೂ.10/- ಗಳನ್ನು ಸಂಘದಲ್ಲಿ ಉಳಿಸಿಕೊಂಡು ಉಳಿದ ಮೊತ್ತವನ್ನು ಯಶಸ್ವಿನಿ ಖಾತೆಗೆ ಪಾವತಿಸತಕ್ಕದ್ದು.

7. ಪಟ್ಟಣ ಸಹಕಾರ ಬ್ಯಾಂಕುಗಳು/ಕೃಷಿಯೇತರ ಪತ್ತಿನ ಸಹಕಾರ ಸಂಘಗಳು ಹಾಗೂ ನಗರ ಪ್ರದೇಶದ ಇತರೆ ಸಹಕಾರ ಸಂಘಗಳಲ್ಲಿ ಹೆಚ್ಚಿನವರು ಗ್ರಾಮೀಣ ಪ್ರದೇಶದ ಸದಸ್ಯರಾಗಿರುತ್ತಾರೆ. ಇಂತಹ ಸದಸ್ಯರನ್ನು ಗ್ರಾಮೀಣ ಸದಸ್ಯರೆಂದು ಪರಿಗಣಿಸಬಹುದೇ?

ಇಲ್ಲ. ಈ ರೀತಿಯ ಬ್ಯಾಂಕುಗಳ/ಸಹಕಾರ ಸಂಘಗಳ ಸದಸ್ಯರನ್ನು ಗ್ರಾಮೀಣ ಸದಸ್ಯರೆಂದು ಪರಿಗಣಿಸಲು ಅವಕಾಶವಿರುವುದಿಲ್ಲ.

8. ಸದಸ್ಯತ್ವ ನೊಂದಣಿ ನಮೂನೆಯಲ್ಲಿ ಗರಿಷ್ಠ 10 ಜನರನ್ನು ನೊಂದಣಿ ಮಾಡಲು ಅವಕಾಶವಿದ್ದು, 10ಕ್ಕಿಂತ ಹೆಚ್ಚಿನ ಸದಸ್ಯರಿದ್ದಲ್ಲಿ ಯಾವ ರೀತಿ ಕ್ರಮವಿಡಬೇಕು?

ಅಗತ್ಯಕ್ಕೆ ಅನುಗುಣವಾಗಿ ಮೂಲ ನಮೂನೆ ಜೊತೆಗೆ ಹೆಚ್ಚುವರಿ ನಮೂನೆಗಳನ್ನು ಲಗತ್ತಿಸಿ ಮಾಹಿತಿ ಭರ್ತಿಮಾಡಬಹುದು.

9. ಪ್ರತಿ ಸದಸ್ಯರಿಗೆ ಒಂದೊಂದು ನಮೂನೆ ತುಂಬಬೇಕೆ?

ಇಲ್ಲ. ಕುಟುಂಬಕ್ಕೆ ಒಂದು ನಮೂನೆ ತುಂಬಬೇಕು.

10. ನಮೂನೆ ಪ್ರತಿಯನ್ನು ಸದಸ್ಯರಿಗೆ ಒದಗಿಸಬೇಕೆ?

ಇಲ್ಲ.

11. ಈ ಹಿಂದಿನ ಯಶಸ್ವಿನಿ ಯೋಜನೆಯಲ್ಲಿ ಪ್ರತಿ ಸದಸ್ಯರಿಗೆ ರೂ.10/-ಗಳ ಪ್ರೋತ್ಸಾಹ ಧನ ನೀಡಲಾಗಿತ್ತಿದೆ. ಆದರೆ ಈಗ ಒಂದು ಕುಟುಂಬದ ಕಾರ್ಡಿಗೆ ರೂ.10/- ಗಳನ್ನು ನಿಗದಿಪಡಿಸಿದೆ. ಈ ಹಿಂದೆ ನೀಡಿದಂತೆ ಪ್ರತಿ ಸದಸ್ಯರಿಗೆ ರೂ.10/- ಗಳನ್ನು ಪ್ರೋತ್ಸಾಹ ಧನವನ್ನು ನೀಡಬೇಕು.

ಈ ಹಿಂದೆ ಪ್ರತಿ ಸದಸ್ಯರ ವಂತಿಗೆ ಗ್ರಾಮೀಣ ರೂ.300/- ಮತ್ತು ನಗರ ರೂ.710/- ಇತ್ತು. ಈಗ ಮೊತ್ತವನ್ನು ಗಣನೀಯವಾಗಿ ಕಡಿಮೆಗೊಳಿಸಿದ್ದು, ನಾಲ್ಕು (4) ಸದಸ್ಯರ ಕುಟುಂಬಕ್ಕೆ ಗ್ರಾಮೀಣ ರೂ.500/- ಮತ್ತು ನಗರ ರೂ.1,000/-ಕ್ಕೆ ನಿಗಧಿಪಡಿಸಿದ್ದು, ಪ್ರತಿ ಸದಸ್ಯರಿಗೆ ಕ್ರಮವಾಗಿ ಕೇವಲ ರೂ.125/- ಮತ್ತು ರೂ.250/- ಮಾತ್ರ ಇರುತ್ತದೆ. ಈ ಹಿನ್ನಲೆಯಲ್ಲಿ ಪ್ರೋತ್ಸಾಹಧನವನ್ನು ಸದ್ಯಕ್ಕೆ

ಕುಟುಂಬದ ಕಾರ್ಡಿಗೆ ರೂ.10/- ಎಂದು ನಿಗದಿಪಡಿಸಲಾಗಿದೆ. ಕಾರ್ಡ್ ದರವನ್ನು ಮುಂದಿನ ದಿನಗಳಲ್ಲಿ ಪರಿಷ್ಕರಿಸಿದ ಸಂದರ್ಭದಲ್ಲಿ ಈ ಬೇಡಿಕೆ ಬಗ್ಗೆ ಯಶಸ್ವಿನಿ ಟ್ರಸ್ಟ್‌ನಲ್ಲಿ ಚರ್ಚಿಸಿ ತೀರ್ಮಾನಿಸಲಾಗುವುದು.

12. ಕ್ಯೂಆರ್ ಕೋಡ್ ಅನ್ನು ಸಂಘವು ನೀಡಬೇಕೆ?

ಇಲ್ಲ. ಗುರುತಿನ ಚೀಟಿಯನ್ನು ಪ್ರಿಂಟ್ ಮಾಡುವ ಸಂಸ್ಥೆ ಕ್ಯೂಆರ್ ಕೋಡ್ ಅಥವಾ ಯೂನಿಕ್ ಐ.ಡಿ ಕಾರ್ಡ್ ಅನ್ನು ನೀಡುತ್ತದೆ.

13. ನಮೂನೆಯಲ್ಲಿ ಮಾಹಿತಿ ಸಂಗ್ರಹಿಸಿದ ಕೂಡಲೇ ಸಹಕಾರ ಸಂಘದ ಮೂಲಕವೇ ಐ.ಡಿ ಕಾರ್ಡ್ ನೀಡಬೇಕೆ?

ಇಲ್ಲ. ಇದಕ್ಕಾಗಿ ನೇಮಕವಾಗಿರುವ ಸಂಸ್ಥೆ ಕಾರ್ಡ್ ವಿತರಣೆ ಮಾಡುವ ಕಾರ್ಯವನ್ನು ಮುಂದಿನ ದಿನಗಳಲ್ಲಿ ಮಾಡುತ್ತದೆ. ಅದಕ್ಕಾಗಿ ಸಹಕಾರ ಸಂಘದವರು ನಮೂನೆಯ ಎಲ್ಲಾ ಕಾಲಂಗಳಲ್ಲಿ ಖಾಲಿ ಬಿಡದೇ ಸರಿಯಾದ ಮಾಹಿತಿಯನ್ನು ಭರ್ತಿ ಮಾಡಿ ದೃಢೀಕರಿಸಬೇಕು. ಜಿಲ್ಲಾ ಉಪನಿಬಂಧಕರು ಸರಿಯಾಗಿ ಭರ್ತಿಯಾಗಿರುವ ಬಗ್ಗೆ ಖಾತರಿ ಪಡೆದಕೊಂಡ ನಂತರವೇ ಕಾರ್ಡ್ ಪ್ರಿಂಟಿಂಗ್‌ಗೆ ನಮೂನೆಗಳನ್ನು ರವಾನಿಸಲು ಕ್ರಮವಿಡತಕ್ಕದ್ದು.

14. ಆಯುಷ್ಮಾನ್ ಭಾರತ್ ಯೋಜನೆಯಲ್ಲಿ ಕಾರ್ಡ್ ಹೊಂದಿರುವವರು ಯಶಸ್ವಿನಿ ಯೋಜನೆಯಡಿ ಸದಸ್ಯತ್ವ ಪಡೆಯಬಹುದೇ?

ಆಯುಷ್ಮಾನ್ ಭಾರತ್ ಕಾರ್ಡ್ ಹೊಂದಿರುವವರು ಯಶಸ್ವಿನಿ ಕಾರ್ಡ್ ಪಡೆಯಲು ಯಾವುದೇ ನಿರ್ಬಂಧ ಇರುವುದಿಲ್ಲ. ಆದರೆ ಫಲಾನುಭವಿಗಳು ಯಾವುದಾದರು ಒಂದು ಯೋಜನೆಯಲ್ಲಿ ಮಾತ್ರ ವೈದ್ಯಕೀಯ ಚಿಕಿತ್ಸೆ/ಶಸ್ತ್ರ ಚಿಕಿತ್ಸಾ ವೆಚ್ಚವನ್ನು ಪಡೆಯಲು ಅವಕಾಶವಿರುತ್ತದೆ.

***************